**<u>1ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ</u>**

**ಸಿ.ಸಿ ಸಂಖ್ಯೆಃ 1557-2021**

**ಪಿ.ಡಬ್ಲ್ಯೂ-1**

**ಪ್ರಮಾಣೀಕರಿಸಿದ ದಿನಾಂಕ :12.06.2026.**

**<u>ಪಾಟೀ ಸವಾಲುಃ- ಆರೋಪಿತರ ಪರ ಶ್ರೀ ಕೆ.ಎಸ್.ಎ.ಆರ್. ವಕೀಲರಿಂದ</u>**

1. ಚಾಸ 6 ಮತ್ತು 7 ನಮ್ಮ ಊರಿನ ಸುತ್ತಮುತ್ತಲಿನ ಜನ ಎಂದರೆ ಸರಿ. ಚಾಸ 2, 2ನೇ ಆರೋಪಿಯ ಬಳಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ಒಪ್ಪಂದದ ದಾಖಲೆ ಇರುವುದಿಲ್ಲ. ಚಾಸ 2 ಎಲ್ಲಿ ಕೆಲಸಕ್ಕೆ ಕರೆದರು ಹೋಗುತ್ತಿದ್ದರು ಎಂದರೆ ಸರಿ. 1ನೇ ಆರೋಪಿಯ ಕಟ್ಟಡ ಕೆಲಸಕ್ಕೆ ಹೋಗುವ ಬಗ್ಗೆ ಚಾಸ 2 ಆರೋಪಿತರೊಂದಿಗೆ ಯಾವುದೇ ಒಪ್ಪಂದ ಪತ್ರವನ್ನು ಮಾಡಿಕೊಂಡಿರಲಿಲ್ಲ. ಗಾರೆ ಕೆಲಸಗಾರರ ಸಂಘದಲ್ಲಿ ಚಾಸ 2 ಸದಸ್ಯತ್ವವನ್ನು ಪಡೆದಿರಲಿಲ್ಲ. ಚಾಸ 2 ಕಟ್ಟಡದಿಂದ ಬಿದ್ದರು ಎಂದು ಹೇಳುತ್ತಿರುವ ದಿನ ನಾನು ಮನೆಯಲ್ಲಿಯೇ ಇದ್ದೆ. ಚಾಸ 2 ಯಾವ ರೀತಿ ಬಿದ್ದ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

2. ಚಾಸ 2 ಯಾವ ರೀತಿ ಬಿದ್ದ ಎಂದು ನಾನು ನೋಡಿರುವುದಿಲ್ಲ, ಬೇರೆಯವರು ಹೇಳಿದ್ದನ್ನು ಕೇಳಿದ್ದೇನೆ ಅಷ್ಟೇ. ಚಾಸ 2, 1ನೇ ಆರೋಪಿಯ ಕಟ್ಟಡ ಕೆಲಸಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಚಾಸ 2 ರವರಿಗೆ ಆಗಿರುವ ತೀವ್ರ ಸ್ವರೂಪದ ಗಾಯಕ್ಕೆ ಆರೋಪಿತರು ಹೊಣೆಗಾರರಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯ ಮಾಲೀಕತ್ವದ ಜಾಗದಲ್ಲಿ ಚಾಸ 2 ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿತರಿಂದ ಅಕ್ರಮವಾಗಿ ಹಣವನ್ನು ಪಡೆಯುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**

ಓದಿ ಹೇಳಿ ಕೇಳಿ ಸರಿ ಇದೆ

**1ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,**

**ಸಾಗರ**